ಶ್ರೀ ಕೆ. ಜಯಪ್ರಕಾಶ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ಕುಡುಬಿ ಎನ್ನುವ ಒಂದು ಜನಾಂಗವಿದೆ. ಅವರು ಕಾಡು ಪ್ರದೇಶದಲ್ಲಿ ವಾಸ ಮಾಡಿ ಜೀವನ ನಡೆಸುವಂಥವರು. ಅವರ ಜೀವನ ಶೈಲಿಯ ಬಗ್ಗೆ ನಾನು ಒಂದು ಕ್ಯಾಸೆಟ್ಟನ್ನು ಮಾಡಿ, ಅದರ ಸಿ.ಡಿ. ಯನ್ನು ಕಾಗೋಡು ತಿಮ್ಮಪ್ಪನವರು ಸಮಾಜ ಕಲ್ಯಾಣ ಇಲಾಖೆಯ ಸಚಿವರಾಗಿದ್ದಾಗ ಕೊಟ್ಟಿದ್ದೆ. ಈಗ ಅದಕ್ಕೆ ತಾವು ಅಧ್ಯಕ್ಷರಾಗಿದ್ದೀರಿ ಮತ್ತು ಅದರ ಇಬ್ಬರು ಸದಸ್ಯರು ಇಲ್ಲೇ ಇದ್ದಾರೆ. ಆ ಜನಾಂಗವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವಂಥಾದ್ದು ಬಹಳ ಅಗತ್ಯವಾಗಿದೆ. ಆದ್ದರಿಂದ ನಾನು ತಮ್ಮ ಮುಖೇನ, ಅದರ ಅಧ್ಯಕ್ಷರು ಮತ್ತು ಸದಸ್ಯರನ್ನು ಕೇಳಿಕೊಳ್ಳುವುದೇನೆಂದರೆ, ಈ ಬಾರಿ ಪ್ರಥಮ ಸಭೆಯಲ್ಲಿ ಅವರನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸಲು ಶಿಫಾರಸು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಕೃಷ್ಣಪ್ಪ : ತಾವು ಕೊಟ್ಟಿರುವ ಸಲಹೆಯನ್ನು ಪರಿಶೀಲಿಸುತ್ತೇವೆ.

ಮಂಡ್ಯ ಜಿಲ್ಲೆಯಲ್ಲಿನ ಮೀನುಗಾರಿಕೆ ಚಟುವಟಿಕೆ

544 (4755) : ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) ಮಾನ್ಯ ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯಲ್ಲಿ ಮತ್ಸ್ಯೋದ್ಯಮಕ್ಕೆ ಬಳಸಿಕೊಳ್ಳುತ್ತಿರುವ ಕೆರೆಗಳ ಸಂಖ್ಯೆ ಎಷ್ಟು?

ಆ) ಈ ಕೆರೆಗಳಲ್ಲಿ ಎಷ್ಟು ಕೆರೆಗಳನ್ನು ಗ್ರಾಮ ಪಂಚಾಯಿತಿಗಳಿಗೆ ವಹಿಸಲಾಗಿದೆ?

ಇ) ರಾಜ್ಯದಲ್ಲಿ ಮೀನುಗಾರಿಕೆ ಮಹಾಮಂಡಲದ ಸ್ವಾಮ್ಯದಲ್ಲಿ ಇರುವ ಕೆರೆಗಳೆಷ್ಟು?

ಈ) ಮೀನುಗಾರಿಕೆಯಿಂದ ಮಂಡ್ಯ ಜಿಲ್ಲೆಯಲ್ಲಿ ಗ್ರಾಮ ಪಂಚಾಯಿತಿಗಳಿಗೆ ದೊರೆಕುತ್ತಿರುವ ಸಂಪನ್ಮೂಲದ ವಿಚಾರಗಳೇನು?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು)

ಅ) ಮಂಡ್ಯ ಜಿಲ್ಲೆಯಲ್ಲಿ ಮತ್ಸ್ಯೋದ್ಯಮಕ್ಕೆ 396 ಕೆರೆಗಳನ್ನು ಬಳಸಿಕೊಳ್ಳಲಾಗುತ್ತಿದೆ.

ಆ) ಇವುಗಳಲ್ಲಿ 36 ಕೆರೆಗಳನ್ನು ಗ್ರಾಮ ಪಂಚಾಯಿತಿಗಳಿಗೆ ಗುತ್ತಿಗೆ ಮೇರೆಗೆ ವಹಿಸಿಕೊಡಲಾಗಿದೆ.

ಇ) ರಾಜ್ಯದಲ್ಲಿ 79 ಕೆರೆಗಳು ಕರ್ನಾಟಕ ರಾಜ್ಯ ಸಹಕಾರಿ ಮೀನುಗಾರಿಕೆ ಮಹಾಮಂಡಳಿ, ಮೈಸೂರು ಇವರ ಸ್ವಾಮ್ಯದಲ್ಲಿರುತ್ತವೆ.

ಈ) ಜಲಸಂಪನ್ಮೂಲಗಳೊಂದಿಗೆ ಉತ್ತಮ ತಳಿ ಮೀನುಮರಿ ಜೊತೆಗೆ ತಾಂತ್ರಿಕತೆ ಮಾಹಿತಿಯನ್ನು ನೀಡಲಾಗುತ್ತಿದೆ. ಗ್ರಾಮ ಪಂಚಾಯಿತಿಗಳು ಗುತ್ತಿಗೆಗೆ ಪಡೆದ ಕೆರೆಗಳಲ್ಲಿ ಹುಲ್ಲುಗೆಂಡೆ ಮೀನುಮರಿಗಳನ್ನು ಬಿಡಲು ಇಲಾಖಾ ವತಿಯಿಂದ ಖರೀದಿಸಿದಲ್ಲಿ, ಅವುಗಳ ಮೌಲ್ಯದ ಮೇಲೆ ಶೇ. 50 ರಷ್ಟು ಸಹಾಯಧನ ನೀಡಲಾಗುತ್ತಿದೆ.

ಶ್ರೀ ಎಂ.ಎಸ್. ಆತ್ಮಾನಂದ : ಮಾನ್ಯ ಅಧ್ಯಕ್ಷರೆ, ಮಂಡ್ಯ ಜಿಲ್ಲೆಯಲ್ಲಿ ಮತ್ಸ್ಯೋದ್ಯಮಕ್ಕೆ ಬಳಸಿಕೊಳ್ಳುತ್ತಿರುವ 396 ಕೆರೆಗಳಿದ್ದು, ಅವುಗಳಲ್ಲಿ 36 ಕೆರೆಗಳನ್ನು ಮಾತ್ರ ಗ್ರಾಮ ಪಂಚಾಯಿತಿಗಳಿಗೆ ವಹಿಸಿಕೊಡಲಾಗಿದೆ ಎಂದು ತಿಳಿಸಿದ್ದಾರೆ. ಉಳಿದ 330 ಕೆರೆಗಳ ಪರಿಸ್ಥಿತಿಯೇನು? ಗ್ರಾಮ ಪಂಚಾಯಿತಿಗಳಿಗೆ ಮೀನುಗಾರಿಕೆಯಿಂದ ದೊರಕುತ್ತಿರುವ ಸಂಪನ್ಮೂಲಗಳ ಬಗ್ಗೆ ನನಗೆ ಇಲ್ಲಿ

ವಿವರಗಳನ್ನು ಒದಗಿಸಿಲ್ಲ. ಹಾಲಿ ಇರತಕ್ಕಂಥ ಕೆರೆಗಳಿಂದ ಗ್ರಾಮ ಪಂಚಾಯಿತಿಗಳಿಗೆ ಎಷ್ಟು ಆದಾಯ ಬರುತ್ತದೆ ಎನ್ನುವುದನ್ನು ನಾನು ಕೇಳಲು ಬಯಸುತ್ತೇನೆ.

ಶ್ರೀ ವಸಂತ ವಿ. ಸಾಲಿಯಾನ : ಮಾನ್ಯ ಅಧ್ಯಕ್ಷರೆ, ಮಂಡ್ಯ ಜಿಲ್ಲೆಯಲ್ಲಿ ಇಲಾಖಾವತಿಯಿಂದ 166 ಕೆರೆಗಳನ್ನು ನಡೆಸುತ್ತಿದ್ದೇವೆ. ಮತ್ತು ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ 177 ಕೆರೆಗಳಿವೆ ಮತ್ತು ಸಣ್ಣ ಕೆರೆಗಳು ಸುಮಾರು 503 ಇದ್ದು, ಒಟ್ಟು 846 ಕೆರೆಗಳು ಮಂಡ್ಯ ಜಿಲ್ಲೆಯಲ್ಲಿವೆ. 36 ಕೆರೆಗಳನ್ನು ಗ್ರಾಮ ಪಂಚಾಯಿತಿಗಳ ಬೇಡಿಕೆಯ ಮೇರೆಗೆ ಅವುಗಳನ್ನು ಗುತ್ತಿಗೆಗೆ ಕೊಟ್ಟಿದ್ದೇವೆ. ಈ ಕೆರೆಗಳಿಂದ 24 ಗ್ರಾಮಪಂಚಾಯಿತಿಗಳಿಗೆ 4,80,824 ರೂಪಾಯಿಗಳ ಆದಾಯ ಸಿಕ್ಕಿದೆ. 2002–03ನೇ ಸಾಲಿನಲ್ಲಿ 396 ಕೆರೆಗಳನ್ನು ಮೀನು ಕೃಷಿಗೆ ಕೊಟ್ಟಿದ್ದರಿಂದ ನಮ್ಮ ಇಲಾಖೆಗೆ ಸುಮಾರು 19,55,000 ರೂಪಾಯಿಗಳ ಆದಾಯ ಸಿಕ್ಕಿದೆ.

ಶ್ರೀ ಎಂ.ಎಸ್. ಆತ್ಮಾನಂದ : ಈ ಕೆರೆಗಳನ್ನು ಗುತ್ತಿಗೆಗೆ ಕೊಡುವುದರಲ್ಲಿ ವೃತ್ತಿಪರ ಮೀನುಗಾರರಿಗೆ ಆದ್ಯತೆ ಸಿಗುತ್ತಿಲ್ಲ. ವೃತ್ತಿಪರ ಮೀನುಗಾರರಿಗೆ ಕೆರೆಗಳನ್ನು ಕೊಡಲು ಸರ್ಕಾರ ಏನು ಕ್ರಮಗಳನ್ನು ಕೈಗೊಳ್ಳತ್ತದೆ ಎಂದು ಕೇಳಲು ಬಯಸುತ್ತೇನೆ.

ಶ್ರೀ ವಸಂತ ವಿ. ಸಾಲಿಯಾನ : ನಮ್ಮ ಇಲಾಖೆಯ ವತಿಯಿಂದ, ಆಯಾ ಜಿಲ್ಲೆಗಳಲ್ಲಿರುವ ಮೀನುಗಾರಿಕಾ ಸಹಕಾರಿ ಸಂಘಗಳಿಗೆ ಪ್ರಥಮ ಆದ್ಯತೆಯನ್ನು ಕೊಟ್ಟು, ಮೂರು ವರ್ಷಗಳ ಗುತ್ತಿಗೆಗೆ ಕೊಡುತ್ತೇವೆ. ಎರಡನೇ ವರ್ಷಕ್ಕೆ ಮೊದಲನೇ ವರ್ಷಕ್ಕಿಂತ ಶೇಕಡಾ ಹತ್ತರಷ್ಟು ಜಾಸ್ತಿ ಮಾಡಿ ಕೊಡುವ ನಾರ್ಮ್ಸ್ ಇದೆ. ಈ ರೀತಿ ಯಾವ ಮೀನುಗಾರಿಕಾ ಸಹಕಾರಿ ಸಂಘಗಳವರು, ನಮಗೆ ಕೆರೆಗಳನ್ನು ಗುತ್ತಿಗೆಗೆ ಕೊಡಬೇಕು ಎಂದು ಅರ್ಜಿ ಸಲ್ಲಿಸುತ್ತಾರೆ. ಅವರಿಗೆ ಕೊಡುತ್ತೇವೆ. ಒಂದಕ್ಕಿಂತ ಹೆಚ್ಚು ಅರ್ಜಿಗಳಿದ್ದರೆ ಮಾತ್ರ ನಾವು ಟೆಂಡರ್ ಮುಖೇನ ಹರಾಜು ಮಾಡುತ್ತೇವೆ. ಹೀಗಾಗಿ ಅಂಥ ಮೀನುಗಾರಿಕಾ ಸಹಕಾರಿ ಸಂಘಗಳಿಗೆ ನಾವು ಪ್ರಥಮ ಆದ್ಯತೆಯನ್ನು ಕೊಡುತ್ತೇವೆ.

ಶ್ರೀ ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ಬರದಿಂದ ಮೀನುಗಾರರಿಗೆ ಬಹಳ ತೊಂದರೆಯಾಗಿದೆ. ಅದಕ್ಕಾಗಿ ನಾನು ಮಾನ್ಯ ಸಚಿವರಲ್ಲಿ ಒಂದು ಪ್ರಶ್ನೆ ಕೇಳುತ್ತೇನೆ. ಮಳೆಯಿಲ್ಲದೆ, ಕೆರೆಯಲ್ಲಿ ನೀರಿಲ್ಲದಿದ್ದುದ್ದರಿಂದ ಮೀನುಗಳು ಸತ್ತುಹೋದವು. ಆದ್ದರಿಂದ, ರೈತರಿಗೆ ಯಾವ ರೀತಿಯ ಸೌಲಭ್ಯಗಳನ್ನು ಒದಗಿಸಿದ್ದೀರಿ, ಅದೇ ರೀತಿಯ ಸೌಲಭ್ಯಗಳನ್ನೇನಾದರೂ ಅಂದರೆ ಅವರಿಗೆ ಕನ್‌ಸೆಷನ್ ಕೊಡುವಿರಾ ಎಂದು ಕೇಳುತ್ತೇನೆ. ಒಂದು ವರ್ಷದ ಗುತ್ತಿಗೆಯ ಹಣವನ್ನೂ ಕಟ್ಟಲು ಅವರಿಗೆ ಆಗುತ್ತಿಲ್ಲ. ಒಂದು ವರ್ಷದ ಹಣವನ್ನು ಮನ್ನಾ ಮಾಡಿ, ಮುಂದಿನ ವರ್ಷದ ಅವಧಿಗೆ ಲೀಸಿಗೆ ಕೊಡುವಿರಾ ಎಂದು ಮಾನ್ಯ ಸಚಿವರನ್ನು ತಮ್ಮ ಮುಖೇನ ಕೇಳುತ್ತೇನೆ.

ಶ್ರೀ ವಸಂತ ವಿ. ಸಾಲಿಯಾನ : ನಮ್ಮ ಇಲಾಖೆಯು ಈಗಾಗಲೇ 24 ಜಿಲ್ಲೆಗಳಲ್ಲಿ ಸರ್ವೆ ಮಾಡಿದ್ದು, ಯಾವಯಾವ ಜಿಲ್ಲೆಗಳಲ್ಲಿ ಇಂಥ ತೊಂದರೆಗಳನ್ನು ಮೀನುಗಾರರು ಎದುರಿಸುತ್ತಿದ್ದಾರೆ, ಯಾವಯಾವ ಜಿಲ್ಲೆಗಳಲ್ಲಿ ಒಳನಾಡು ಮೀನುಗಾರಿಕೆಗೆ ತೊಂದರೆಯಾಗಿದೆ ಎನ್ನುವ ಬಗ್ಗೆ ಒಂದು ರಿಪೋರ್ಟನ್ನು ಸಂಗ್ರಹಿಸಿ, ಸರ್ಕಾರಕ್ಕೆ ಕಳುಹಿಸಿ ಮೂರು ವರ್ಷದ ಗುತ್ತಿಗೆಯನ್ನು ನಾಲ್ಕು ವರ್ಷಗಳಿಗೆ ಮಾಡಲು ಮತ್ತು ಶೇಕಡಾ ಹತ್ತರಷ್ಟು ಫ್ರೀ ಮಾಡಿ ಕೊಡುವಂಥ ಕಾರ್ಯಕ್ರಮವನ್ನು ಈಗಾಗಲೇ ಹಾಕಿ ಕೊಂಡಿದ್ದೇವೆ.